ಕಸೂತಿಯ ಪರದೆ, ಮನೆಯ ಮಧ್ಯದಲ್ಲಿದ್ದ ಕಬ್ಬಿನ ರಸ ತೆಗೆವ ಯಂತ್ರ, ಜೋಡು ಹಗ್ಗಗಳ ಮಜ್ಜಿಗೆ ಮಾಡುವ ಸ್ಟ್ಯಾಂಡು ಹೀಗೆ ಎಲ್ಲಾ ಹಳೆಯ ವಸ್ತುಗಳನ್ನು ತೆಗೆದು ಬಿಸಾಕಿದ್ದಾಳೆ. ಹಿತ್ತಾಳೆಯ ದೀಪ, ಗಂಗಾಳ, ಕುಸುರಿ ಮಾಡಿದ ಪಾನಪಟ್ಟಿಯ ಡಬ್ಬಿ, ಅಡಕೊತ್ತುಗಳನ್ನೆಲ್ಲ ಮೋಡು ಮಾಡಿಸಿ ಡೊಳ್ಳು ಹೊಟ್ಟೆಯ ಚೀನೀ ವಿಗ್ರಹ, ಆಮೆ, ಇಂಥಾವೇನೇನೋ ಹುಚ್ಚುಚ್ಚಾರ ಮೂರ್ತಿ ಮಾಡಿಸಿಬಿಟ್ಟಿದ್ದಾಳೆ. ಅವ್ವ ಹೆಣೆದ ಉಣ್ಣೆಯ ಟೊಪ್ಪಿಗೆಗಳ ದಾರ ಬಿಚ್ಚಿ ಬಿಚ್ಚಿ ತೆಗೆದು ಮತ್ತೇನೋ ಗೊಂಬೆ ಮಾಡಿದ್ದಾಳೆ.

"ಹೂಂ ಬಿಚ್ಚು ಬಿಚ್ಚು ಎಲ್ಲಾ ಎಳೀ ಹೀಂಗ ಬಿಚಕೋತ ಹೋಗು. ಕಡೀಗೆ ಎಲ್ಲಾ ಶೂನ್ಯ, ಬಟಾಬಯಲು. ನಾನು ನೀನು ಎಲ್ಲಾ ಸರ್ವನಾಶ" ಅಂತ ಒಮ್ಮೆ ರಾತ್ರಿಯೆಲ್ಲ ಬಡಬಡಿಸಿದ್ದನವ. ಅಂಬಕ್ಕತ್ತಿ, "ಏನೋ ಕೇಶು ರಾತ್ರಿ ಹೊತ್ತರೆ ಎಲ್ಲಾ ವ್ಯಾಪ ಬಿಟ್ಟು ಆರಾಮ ಮಲಗಬಾರದ? ಕನಸಿನಾಗೂ ಏನೇನು ಬಿಚ್ಚಿ ಸುತ್ತತಿ ಯಾರಿಗೆ ಗೊತ್ತು?" ಅಂತ ಮುಂಜಾನೆ ಚಹ ಕೊಡುತ್ತಾ ಹೇಳಿ ನಕ್ಕಿದ್ದಳು. ಮೈ ಮೇಲೆ ಖಬರಿಲ್ಲದಾಗ ಸ್ವತಕ್ಕೆ ಕೇಳಿಕೊಂಡ ಪ್ರಶ್ನೆಗಳಿಗೆ ಎಚ್ಚರಿದ್ದಾಗ ಉತ್ತರ ಹುಡುಕುವುದು ಕೇಶವನಿಗೆ ಬಹುಶಃ ಆಗಿನಿಂದಲೇ ಗೀಳಾಗಿಹೋಗಿದೆ. ಆಗಾಗ ಅವೇ ಪ್ರಶ್ನೆ – ಅವೇ ಉತ್ತರ. ಹಾಂ, ಹೌದು, ಇಲ್ಲ, ಛೇ ಹಂಗಿರಲಿಕ್ಕಿಲ್ಲ; ಹೀಗೆ ಮನಸ್ಸಿನಲ್ಲೇ ಗೋಣು ಅಡ್ಡಡ್ಡ ಉದ್ದುದ್ದ ಹಾಕುವ ಸರ್ಕಸ್ಸು ನಡೆದೇ ಇರುತ್ತದೆ. 'ಈ ಸರ್ಕಸ್ಸು ಥೇಟ್ ರುಚಿ ಮುಗಿದ ಚೂಯಿಂಗ್ ಗಮ್ಮಿನಂತೆ; ಹಲ್ಲಿಗೆ ಸಿಕ್ಕು ಹಿಗ್ಗುತ್ತ ಕುಗ್ಗುತ್ತ ಸಾಗುವ ಜಿಗುಟು ಮುದ್ದೆ. ಬರೀ ವಸಡಿಗೆ ನೋವು ಮತ್ತೇನಿಲ್ಲ' ತನ್ನ ಹೋಲಿಕೆಗೆ ತಾನೇ ಶುಷ್ಕ ನಗೆ ನಕ್ಕ. ಸುಮ್ಮನೆ ಒಳಹೋಗಿ ಯಾವುದೋ ಇಂಗ್ಲಿಷ್ ಪುಸ್ತಕ ಎತ್ತಿತಂದು ಕೂತ. ಮೊದಲ ಪುಟದ ಹಳದಿ ಹಾಳೆಯ ತುಸು ಮಸುಕಾದ ಅಕ್ಷರಗಳು, ತನ್ನವೆ. 1980 ಜೂನ್; ಅದೇ ತಾನೆ ಯುನಿವರ್ಸಿಟಿ ಸೇರಿಕೊಂಡ ಹುರುಪಲ್ಲಿ ಕೊಂಡ ಹಾರ್ಡಿಯ 'ಟೆಸ್ ಆಫ್ ಡೆಬರವಿಲ್ಲೆ.' ಫೀ ತುಂಬಿ ಉಳಿದ ಹಣದಲ್ಲಿ ಸೆಕೆಂಡ್‌ಹ್ಯಾಂಡ ಪುಸ್ತಕ ಮಳಿಗೆಯಲ್ಲಿ ಕೊಂಡದ್ದು. ಒರಟು ಹಾಳೆಗಳ ಸ್ಪರ್ಶಕ್ಕೆ ಭಾವುಕನಾದ ಕೇಶವ. ಆಗ ಅವ ಪಿಯುಸಿ ಮುಗಿಸಿ ರಜೆಯಲ್ಲಿ ಮನೆಗೆ ಬಂದಿದ್ದನಷ್ಟೆ. ಹೊಟ್ಟೆ ತುಂಬುವಷ್ಟಿದ್ದರೂ ಕಣ್ಣಲ್ಲಿ ತುಂಬಿಕೊಂಡಿದ್ದ ವಿದ್ಯಾಭ್ಯಾಸದ ಕನಸುಗಳಿಗೆ ಬಣ್ಣ ತುಂಬುವಷ್ಟು ಹಣವಿಲ್ಲದ ಪರಿಸ್ಥಿತಿ. ಮನೆಯಲ್ಲಿ ಅಜ್ಜ, ಅಜ್ಜಿ, ಕಾಕಾ, ಕಾಕು ಅವರ ಮಕ್ಕಳು, ಅಪ್ಪನ ಇಬ್ಬರು ತಂಗಿಯರು, ಒಟ್ಟು ಹತ್ತು ಜನರ ಪರಿವಾರ. ಬರಿ ಹೆಸರು ಮಾತ್ರಕ್ಕೆ ಉಳಿದುಕೊಂಡ ಹಾವೇರಿ ಊರಿನ ಜಾಹಗೀರುತನ. 'ತುಸು ಬುದ್ಧಿಮಂದನಂತಿಗಿದ್ದ ತಮ್ಮನ ಸಂಸಾರ ನಾ ಯಾಕ ನಿಭಾಯಿಸಲಿ? ಲಗ್ನವಾದ ಮರು ತಿಂಗಳೇ ಪತಿಯನ್ನು ಕಳಕೊಂಡು ತವರಿಗೆ ಮರಳಿದ ತಂಗಿಯ ಜವಾಬ್ದಾರಿ ನನ್ನ ತಲೆಗೇಕೆ?' ಎಂದು ತನಗೆ ತಾನು ಕೂಡ ಕೇಳಿಕೊಳ್ಳದ ಸಾತ್ವಿಕ ಅಪ್ಪ. ವರ್ಷಕ್ಕೊಂದೇ ಧೋತರ; ಹರಿದರೆ ಅಲ್ಲಲ್ಲಿ ತೇಪೆ. ವರ್ಷಕ್ಕೊಂದೇ ಚಪ್ಪಲಿ ಜೋಡು; ಕಳೀತೆಂದರೆ ಬರಿಯ ಕಾಲು ಅನ್ನುವ ಹಾಗೆ ಬದುಕುತ್ತಿದ್ದ ಅಪ್ಪನನ್ನು, 'ಧಾರವಾಡಕ್ಕೆ ಹೋಗಿ ಕರ್ನಾಟಕ ಯುನಿವರ್ಸಿಟಿಯಲ್ಲಿ ಇಂಗ್ಲಿಷ್ ಆನರ್ಸ ಮಾಡಬೇಕಂತೀನಿ ಅದಕ್ಕೆ ಆರುನೂರು ರೂಪಾಯಿ ಅಡ್ವಾನ್ಸು ಫೀಸು ತುಂಬಬೇಕಾಗೇದ' ಅಂತ ಕೇಳಲು ಬಾಯೇ ಬಂದಿರಲಿಲ್ಲ ಕೇಶವನಿಗೆ. ಅಲ್ಲದೆ ಆ ಬಾರಿ ಚೀಲಗಟ್ಟಲೆ ಹೊಲದ ಜೋಳ ಬಂದಿದ್ದರೂ ಯಾಕೋ ಹುಳ ಬಿದ್ದು ಅಪ್ಪನ ಕೈ ಖಾಲಿಯಾಗಿತ್ತು. ತನಗಾದ ನಿರಾಸೆಯನ್ನು ಯಾರಲ್ಲೂ ಹೇಳದೆ ಕೈಯಲ್ಲಿ ಕಾಲೇಜಿನ ಫಾರ್ಮ್ ಹಿಡಿದು ಕಣ್ತುಂಬಿ ಮಲಗಿದಾಗ ಹತ್ತಿರ ಬಂದು ಕೂತಿದ್ದಳು ಅಂಬಕ್ಕತ್ತೆ.

ಧಡಕ್ಕನೆದ್ದು ಕುಳಿತ ಕೇಶವನಿಗೆ ಹುಶ್ ಅಂತ ಸುಮ್ಮನಾಗಿಸಿದ್ದಳು. "ನಮ್ಮ ರೈತ ಫಕ್ಕೀರನ್ನ ಕರೆದು ಎರಡು ಬುಟ್ಟಿ ಮಾವಿನ ಹಣ್ಣು ಹರಿಸಿಟ್ಟೇನಿ. ಒಟ್ಟು ಎಂಟು ಡಜನ್ ಅವೆ. ಐವತ್ತಕ್ಕೆ ಒಂದು ಡಜನ್ನಿನಂತೆ ನಾಲ್ಕುನೂರು ರೂಪಾಯಿ ಆಮೇಲೆ ನಂದು ಪೆನ್ಶನ್ನಿಂದು ಎರಡುನೂರು, ಅಂದರೆ ಒಟ್ಟು ಆರು ನೂರು, ಬರೋಬ್ಬರಿ ನಿನಗೆ ಫೀಸಿಗೆ ಬೇಕಾದಷ್ಟು. ಈಗ ರಾಮಣ್ಣಗ ಹೇಳಬ್ಯಾಡ